KATK900005432019

5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ತಿಪಟೂರು
ಎಸ್.ಸಿ.ಸಂಖ್ಯೆ: 10039/2019
ಪ್ರಮಾಣೀಕರಿಸಿದ ದಿನಾಂಕ: 29.10.2025.
ಚಾ.ಸಾ-24
ಪ್ರಾ.ಸಾ-20

| | |
|---|---|
| ಹೆಸರು | ಮಂಜುನಾಥ ಎಸ್ |
| ತಂದೆ ಹೆಸರು | ಸಿದ್ಧಗಂಗಯ್ಯ |
| ವಯಸ್ಸು | 35 ವರ್ಷ |
| ಉದ್ಯೋಗ | ಪೋಲಿಸ್ ಕಾನ್ ಸ್ಟೇಬಲ್, ಚಿಕ್ಕನಾಯಕನಹಳ್ಳಿ |
| ವಾಸಸ್ಥಳ | ಚಿಕ್ಕನಾಯಕನಹಳ್ಳಿ |

ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಾನು ತುರುವೇಕೆರೆ ಪೋಲಿಸ್ ಠಾಣೆಯಲ್ಲಿ ದಿಃ 29.07.2012 ರಿಂದ ದಿಃ 30.7.2019 ರವರೆಗೂ ಪೋಲಿಸ್ ಕಾನ್ ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ತುರುವೇಕೆರೆ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ನನಗೆ ಮತ್ತು ಸಿ.ಪಿ.ಸಿ-111 ಮುತ್ತಣ್ಣ, ದಂಡಿನಶಿವರ ಪೋಲಿಸ್ ಠಾಣೆ ನಮ್ಮಿಬ್ಬರಿಗೂ ಕ್ರೈಮ್ ಕರ್ತವ್ಯಕ್ಕಾಗಿ ನೇಮಕ ಮಾಡಿರುತ್ತಾರೆ. ದಿಃ 01.03.2019 ರಂದು ತುರುವೇಕೆರೆ ಪೋಲಿಸ್ ಠಾಣೆ ಮೊಕದ್ದಮೆ ಸಂಖ್ಯೆ: 14/2019 ಕಲಂ 302,201 ಐ.ಪಿ.ಸಿ ಕೇಸಿನಲ್ಲಿ ಆರೋಪಿಯ ಪತ್ತೆ ಬಗ್ಗೆ ನೇಮಕ ಮಾಡಿರುತ್ತಾರೆ. ಅದರಂತೆ

ನಾನು ಮತ್ತು ಚಾಸಾ–25 ರವರು ಇಬ್ಬರು ನೊಣವಿನಕೆರೆ, ಹಾಲ್ಲೂರು, ಕೆ–ಮಾವಿನಹಳ್ಳಿ ಹಾಗೂ ತಂಡಗ ಗ್ರಾಮಗಳಿಗೆ ಹೋಗಿ ಭಾತ್ಮೀದಾರರನ್ನು ವಿಚಾರ ಮಾಡಿದ್ದು, ತಂಡಗ ಗ್ರಾಮದಲ್ಲಿ ಗೋವಿಂದರಾಜು @ ಕತ್ತೆರಾಜು ಬಿನ್ ಲೇಟ್ ತಿಮ್ಮಯ್ಯ ರವರು ತಂಡಗ ಗ್ರಾಮದ ಅವರ ಮನೆಯ ಮುಂದೆ ಇದ್ದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಬೆಳಗ್ಗೆ 7.00 ಗಂಟೆಗೆ ಸಿಕ್ಕ ಗೋವಿಂದರಾಜುವರವನ್ನು ವಿಚಾರಣೆ ಮಾಡಲಾಗಿ, ಅವರು ಗೋವಿಂದರಾಜು ಎಂದು ಒಪ್ಪಿಕೊಂಡಿದ್ದು ನಂತರ ಆತನನ್ನು ಕರೆದುಕೊಂಡು ತುರುವೇಕೆರೆ ವೃತ್ತ ನಿರೀಕ್ಷಕರ ಕಛೇರಿಗೆ ಕರೆದುಕೊಂಡು ಹೋಗಿ ತನಿಖಾಧಿಕಾರಿಗಳಾದ ಸಲೀಂ ರವರ ಮುಂದೆ ಬೆಳಗ್ಗೆ 8.00 ಗಂಟೆಯ ಸಮಯದಲ್ಲಿ ಹಾಜರುಪಡಿಸಿ, ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು **ನಿ.ಪಿ–19** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–19(ಎ) ಎಂದು ಗುರುತಿಸಲಾಯಿತು. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ ಗೋವಿಂದರಾಜು ರವರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಡಿ ವಕೀಲರಿಂದಃ**

ಗೋವಿಂದರಾಜು ರವರ ವಾಸದ ಸ್ಥಳ ತಂಡಗ ಗ್ರಾಮ ಎಂದು ನನಗೆ ಗೊತ್ತಿತ್ತು. ನನಗೂ ಹಾಗೂ ಚಾಸಾ–25 ರವರಿಗೆ ಆರೋಪಿ ಪತ್ತೆ ಬಗ್ಗೆ ಯಾವುದೇ ಲಿಖಿತ ಆದೇಶವನ್ನು ಮಾಡಿರುವುದಿಲ್ಲ, ಮೌಖಿಕವಾಗಿ ತಿಳಿಸಿರುತ್ತಾರೆ. ಆರೋಪಿತನು ಅವರ ಮನೆಯ ಮುಂದೆ ಇದ್ದನು. ಸದರಿ ಗೋವಿಂದರಾಜು ರವರು ಅಂದು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ನನಗೆ ನೆನಪಿರುವುದಿಲ್ಲ. ಸದರಿ ತುರುವೇಕೆರೆ ವೃತ್ತ ನಿರೀಕ್ಷಕರು ನನಗೆ ಹಾಗೂ ಚಾಸಾ–

25 ರವರಿಗೆ ಆರೋಪಿ ಪತ್ತೆ ಬಗ್ಗೆ ಯಾವುದೇ ಕರ್ತವ್ಯಕ್ಕೆ ನೇಮಕ ಮಾಡಿರುವುದಿಲ್ಲ ಹಾಗೂ ನಾವು ಯಾವುದೇ ಆರೋಪಿತನನ್ನು ದಸ್ತುಗಿರಿ ಮಾಡಿ, ಸಿ.ಪಿ.ಐ ತುರುವೇಕರೆ ವೃತ್ತ ಇವರ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ, ಆತನನ್ನು ಎಲ್ಲಿಯೂ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಪ್ರಕರಣದಲ್ಲಿ ಯಾವುದೇ ಕರ್ತವ್ಯ ನಿರ್ವಹಿಸದಿದ್ದರೂ ಸಹಃ ನಿ.ಪಿ–19 ಅನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಹಾಜರುಪಡಿಸಿ, ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ಮರುವಿಚಾರಣೆ ಇಲ್ಲವೆಂದಿದ್ದಾರೆ**).

(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು**).

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಸಹಿ/–**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**